## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ಇವರು ನಿಯಮ 72ರ ಮೇರೆಗೆ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ

(ಸಂಖ್ಯೆ: ಕವಿಪ/ಪ್ರಶಾ/98/149ನೇಅ/ನಿ–72/2023)

ವಿಷಯ:

ಬಿಬಿಎಂಪಿ ವ್ಯಾಪ್ತಿಯಲ್ಲಿ ಇರುವ ಪ್ರಮುಖ ಹಾಗೂ ಎಲ್ಲಾ ರೀತಿಯ ರಸ್ತೆ ಗುಂಡಿಗಳನ್ನು ವೈಜ್ಞಾನಿಕವಾಗಿ ಹಾಗೂ ತಾಂತ್ರಿಕವಾಗಿ ಮುಚ್ಚುವ ಸಲುವಾಗಿ ಪೈಥಾನ್ ಆಟೋಮೆಟಿಕ್ ಪಾಟ್‌ಹೋಲ್ ಫಿಲ್ಲಿಂಗ್ ಯಂತ್ರಗಳ ಮೂಲಕ ಮುಚ್ಚಲು ಬಿಬಿಎಂಪಿ ವತಿಯಿಂದ ಮೆ.ಅಮೆರಿಕನ್ ಟೆಕ್ನಾಲಾಜೀಸ್ ಮತ್ತು ಸಲುಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರೊಂದಿಗೆ ವಾರ್ಷಿಕ ನಿರ್ವಹಣಾ ಒಪ್ಪಂದವನ್ನು ಪ್ರಾಯೋಗಿಕವಾಗಿ 2014–15 ರಲ್ಲಿ ಮಾಡಿಕೊಂಡಿದ್ದು, ತದ ನಂತರ, ರಸ್ತೆ ಸ್ಥಿತಿಗತಿಗಳ ಬಗ್ಗೆ ಮತ್ತು ರಸ್ತೆ ಗುಂಡಿಗಳನ್ನು ಮುಚ್ಚುವ ಹಾಗೂ ವಾರ್ಷಿಕ ನಿರ್ವಹಣಾ ಒಪ್ಪಂದವನ್ನು ಸದರಿ ಕಂಪನಿಯೊಂದಿಗೆ 2016–17 ರಿಂದ ಮಾಡಿಕೊಂಡಿರುವ ಬಗ್ಗೆ ಹಾಗೂ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳ ನಿರ್ವಹಣೆ ಹಾಗೂ ರಸ್ತೆ ಗುಂಡಿಗಳ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿದ್ದು, ಸದರಿ ದೂರುಗಳನ್ನು ತಡೆಗಟ್ಟಲು ಬಿಬಿಎಂಪಿ ಯಿಂದ ಶಾಶ್ವತ ಪರಿಹಾರ ಕಂಡುಕೊಳ್ಳಲು ಕೈಗೊಂಡಿರುವ ಕ್ರಮಗಳು ಹಾಗೂ ಇದಕ್ಕೆ ತಗುಲಿರುವ ವೆಚ್ಚದ ಸಂಪೂರ್ಣ ಮಾಹಿತಿಯನ್ನು ಸದನದ ಸಭೆಗೆ ತಿಳಿಸುವಂತೆ ಕೋರಿ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ.

ಉತ್ತರ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 13,500 ಕಿ.ಮೀ.ಗೂ ಅಧಿಕ ರಸ್ತೆಯ ಜಾಲ ಇರುತ್ತದೆ. ಅತೀ ಹೆಚ್ಚಿನ ವಾಹನ ಸಾಂದ್ರತೆ, ಅಕಾಲಿಕ ಮಳೆ ಹಾಗೂ ಇತರೆ ಕಾರಣಗಳಿಂದಾಗಿ ನಗರದ ರಸ್ತೆಗಳಲ್ಲಿ ರಸ್ತೆಗುಂಡಿಗಳು ಉಂಟಾಗುತ್ತಿರುತ್ತವೆ. ನಗರದ ರಸ್ತೆಗಳನ್ನು ಸಾರ್ವಜನಿಕರ ಬಳಕೆಗೆ ಸುಸ್ಥಿತಿಯಲ್ಲಿಡುವ ಉದ್ದೇಶದಿಂದ ರಸ್ತೆ ನಿರ್ವಹಣೆಗೆ ದಿನಾಂಕ: 26–05–2014 ರಂದು ಮೆ॥ ಅಮೆರಿಕನ್ ರೋಡ್ ಟೆಕ್ನಾಲಾಜೀಸ್ ಮತ್ತು ಸಲುಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಬಿಬಿಎಂಪಿ ವತಿಯಿಂದ ಕಾರ್ಯಾದೇಶ ನೀಡಲಾಗಿತ್ತು. ಸದರಿ ಗುತ್ತಿಗೆ ಅವಧಿ ಪೂರ್ಣಗೊಂಡ ನಂತರ ರಸ್ತೆ ನಿರ್ವಹಣೆ ಮಾಡಲು 2016–17ರಲ್ಲಿ ಮತ್ತೊಮ್ಮೆ ಟೆಂಡರ್ ಆಹ್ವಾನಿಸಿ, ದಿನಾಂಕ: 04–01–2017ರಲ್ಲಿ ಮೆ॥ ಅಮೇರಿಕನ್ ಟೆಕ್ನಾಲಾಜೀಸ್ ಮತ್ತು ಸಲುಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿತ್ತು. 2016–17 ರಿಂದ ದಿನಾಂಕ: 03–01–2022 ರವರೆಗೆ (5 ವರ್ಷಗಳ ಅವಧಿಗೆ) ರಸ್ತೆ ನಿರ್ವಹಣೆಗೆ ಸದರಿ ಸಂಸ್ಥೆಗೆ ರೂ.19,81,73,054.00 ಗಳನ್ನು ಪಾವತಿಸಲಾಗಿರುತ್ತದೆ.

ಮುಂದುವರೆದು, ರಸ್ತೆ ದುರಸ್ಥಿ ಕಾರ್ಯವನ್ನು ಸಮರ್ಪಕ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗಲು ಬೆಂಗಳೂರು ಉತ್ತರ ತಾಲ್ಲೂಕು, ಕಣ್ಣೂರು ಗ್ರಾಮದಲ್ಲಿ ಪಾಲಿಕೆ ವತಿಯಿಂದ ಸ್ವಂತ ಡಾಂಬರು ಮಿಶ್ರಣ ಘಟಕವನ್ನು ಸ್ಥಾಪಿಸಲಾಗಿರುತ್ತದೆ. ದಿನಾಂಕ: 19–08–2021 ರಂದು ಮೆ॥ ಜೆ.ಎಂ.ಸಿ ಕನ್ಸ್ಟ್ರಕ್ಷನ್ಸ್ ಪ್ರೈ.ಲಿ. ಸಂಸ್ಥೆಗೆ ಸದರಿ ಡಾಂಬರು ಮಿಶ್ರಣ ಘಟಕದಿಂದ ರಸ್ತೆ ಗುಂಡಿಮುಚ್ಚುವ ಕಾರ್ಯಕ್ಕೆ ಮಿಶ್ರಣ ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿರುತ್ತದೆ. ಈವರೆಗೆ ಮೆ॥ ಜೆ.ಎಂ.ಸಿ ಕನ್ಸ್ಟ್ರಕ್ಷನ್ಸ್ ಪ್ರೈ.ಲಿ. ಸಂಸ್ಥೆಗೆ ರೂ.34.80 ಕೋಟಿಗಳನ್ನು ರಸ್ತೆ ದುರಸ್ಥಿ ಕಾರ್ಯಕ್ಕಾಗಿ ಪಾವತಿಸಲಾಗಿರುತ್ತದೆ. ಪಾಲಿಕೆಯ ಏಕೈಕ ಡಾಂಬರು ಮಿಶ್ರಣ ಘಟಕದಿಂದ ಇಡೀ ನಗರದ ರಸ್ತೆ ಗುಂಡಿಗಳನ್ನು ಮುಚ್ಚಲು ಕಷ್ಟಸಾಧ್ಯವಾಗಿರುತ್ತದೆ.

ಆದುದರಿಂದ, ಪಾಲಿಕೆಯ ಡಾಂಬರು ಮಿಶ್ರಣ ಘಟಕದಿಂದ ಪಾಲಿಕೆಯ ಯಲಹಂಕ ಹಾಗೂ ಪೂರ್ವ ವಲಯದ ರಸ್ತೆ ಗುಂಡಿಗಳನ್ನು ಮುಚ್ಚಿ, ರಸ್ತೆಯ ಹಾಳಾದ ಭಾಗಗಳನ್ನು ದುರಸ್ಥಿ ಪಡಿಸಲು ಯೋಜಿಸಿ, ಉಳಿಕೆ ವಲಯದ ರಸ್ತೆ ಗುಂಡಿಗಳನ್ನು ಈಗಾಗಲೆ ಸ್ಥಾಪಿತವಾಗಿರುವ ಇತರೆ ಖಾಸಗಿ ಡಾಂಬರು ಮಿಶ್ರಣ ಘಟಕಗಳಿಂದ ಮಿಶ್ರಣ ಪಡೆದು ರಸ್ತೆ ಗುಂಡಿಗಳನ್ನು ಮುಚ್ಚಲು ದಿನಾಂಕ: 12-09-2022 ರಂದು ಕಾರ್ಯಾದೇಶ ನೀಡಲಾಗಿರುತ್ತದೆ.

ಅಲ್ಲದೆ, ಮೇ-2022ರಲ್ಲಿ Fix my street (FMS) ಎಂಬ application ನ್ನು ಸಿದ್ಧಪಡಿಸಿ, ರಸ್ತೆಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ಡಿಜಿಟಲೀಕರಣಗೊಳಿಸಲಾಗಿರುತ್ತದೆ. ಇದರಿಂದ ಅಭಿಯಂತರರು, ಸಾರ್ವಜನಿಕರು ಹಾಗೂ ಪೊಲೀಸ್ ಸಿಬ್ಬಂದಿಗಳು ರಸ್ತೆಗುಂಡಿಗಳ ಛಾಯಾಚಿತ್ರಗಳನ್ನು ತೆಗೆದು, ಈ FMS app ನಲ್ಲಿ ನಮೂದಿಸಬಹುದಾಗಿರುತ್ತದೆ. ಹೀಗೆ ದಾಖಲಾದ ಗುಂಡಿಗಳನ್ನು ಗುತ್ತಿಗೆದಾರರು ರಸ್ತೆ ಗುಂಡಿಗಳನ್ನು ಕ್ಷಿಪ್ರವಾಗಿ ಮುಚ್ಚಲು ಅನುಕೂಲಕರವಾಗುತ್ತದೆ. ಇದರಿಂದಾಗಿ, ನಗರದ ರಸ್ತೆಗಳನ್ನು ಗುಂಡಿಮುಕ್ತ ಮಾಡಲು ಸಹಕಾರಿಯಾಗಿರುತ್ತದೆ. ಈ ರೀತಿಯಾಗಿ ಬೆಂಗಳೂರು ನಗರದ ರಸ್ತೆ ಗುಂಡಿಗಳನ್ನು ಸಮರ್ಪಕವಾಗಿ ಮುಚ್ಚಲು ಬಿಬಿಎಂಪಿ ವತಿಯಿಂದ ಕ್ರಮವಹಿಸಲಾಗಿರುತ್ತದೆ.

**ಸಂಖ್ಯೆ: ನಅಇ 125 ಎಂಎನ್‌ವೈ 2023 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ